# ಕನ್ನಡದ ನಿಜದನಿ

'ನಾನು ನನ್ನ ಸಾಹಿತ್ಯ ಮತ್ತು ಸಿನಿಮಾಗಳಲ್ಲಿ ಸಾಮಾಜಿಕ ಕಾಳಜಿಯನ್ನು ಬಿಟ್ಟಿಲ್ಲ; ಬಿಡುವುದಿಲ್ಲ. ವ್ಯಕ್ತಿಯ ಸೃಜನಶೀಲ ಬದುಕು ಮತ್ತು ಸಾಮಾಜಿಕ ಬದುಕು ಪರಸ್ಪರ ಬೆಸೆದುಕೊಂಡಿದೆಯೇ ಹೊರತು ಪ್ರತ್ಯೇಕವಲ್ಲ ಎಂಬ ನಂಬಿಕೆಯೇ ಇದಕ್ಕೆ ಕಾರಣ. ಸಾಹಿತ್ಯವೆನ್ನುವುದು ನನಗೆ ಲೋಲುಪತೆ ಅಲ್ಲ; ಅದು ಸಾಮಾಜಿಕತೆ' ಎಂದಿರುವ ಲೇಖಕ ಬರಗೂರು ರಾಮಚಂದ್ರಪ್ಪ ಅವರ ಸಂದರ್ಶನ ಈ ಸಂಚಿಕೆಯಲ್ಲಿದೆ. ಈ ಸಂದರ್ಶನದಲ್ಲಿ ಬರಗೂರರು ಸಾಗಿ ಬಂದ ದಾರಿ, ಅವರ ನಿಲುವು, ಬದ್ಧತೆಗಳ ಕಿರುನೋಟವಿದೆ. ಅವರ ಎಲ್ಲ ಕ್ರಿಯೆ, ಪ್ರತಿಕ್ರಿಯೆಗಳ ಹಿಂದೆ ಸಮಾಜದ ಆರೋಗ್ಯದ ಕುರಿತಾದ ಎಚ್ಚರ, ಕಾಳಜಿ ಕೆಲಸ ಮಾಡುತ್ತದೆ ಎಂಬುದನ್ನು ಕನ್ನಡಿಗರು ಈಗಾಗಲೇ ಮನಗಂಡಿದ್ದಾರೆ.

ಬರಗೂರರ ಹೋರಾಟ ಮತ್ತು ಸಾಹಿತ್ಯದ ಬದುಕಿಗೆ ಸುಮಾರು ಅರ್ಧಶತಮಾನ. ಅವರು ಕನ್ನಡ ನಾಡು–ನುಡಿಗೆ ಸಂಬಂಧಿಸಿದಂತೆ ನಿರಂತರವಾಗಿ ಕೆಲಸ ಮಾಡುತ್ತ, ಎಲ್ಲ ಸ್ತರದ ಜನಮಾನಸವನ್ನು ತಮ್ಮ ಬದುಕು–ಬರಹದಿಂದ ಪ್ರಭಾವಿಸುತ್ತ ಬಂದಿದ್ದಾರೆ. ಜನಪರವಾದ ಬಂಡಾಯ ಸಾಹಿತ್ಯ ಸಂಘಟನೆಯ ಮುಂಚೂಣಿಯಲ್ಲಿ ನಿಂತು, ಬಂಡಾಯವನ್ನು ಕೇವಲ ಬರಹಕ್ಕೆ ಮಾತ್ರ ಸೀಮಿತಗೊಳಿಸದೆ ಅದನ್ನು ಬದುಕಿಗೆ ವಿಸ್ತರಿಸಿದರು. ಸಾಮಾಜಿಕ ಚಳವಳಿಯಾಗಿ ರೂಪಿಸಿದರು. ಕರ್ನಾಟಕದ ಮೂಲೆಮೂಲೆಗಳ ಲೇಖಕರು ಬರೆಯುವಂತಾಗಲು ಈ ಸಂಘಟನೆ ಒಂದು ಮುಖ್ಯ ಕಾರಣ. ಅದರಲ್ಲಿ ಬರಗೂರರ ಪಾಲು ದೊಡ್ಡದು.

ಸರ್ಕಾರಿ ಸಂಸ್ಥೆಗಳ ಮುಖ್ಯ ಸ್ಥಾನಗಳಲ್ಲಿ ಇದ್ದುಕೊಂಡು ಕನ್ನಡ ಸಾಹಿತ್ಯ–ಭಾಷೆಯ ಕೆಲಸ ಮಾಡಿದ ಬರಗೂರರು, ಅವುಗಳಿಂದ ಹೊರಗಿದ್ದಾಗಲೂ ಆ ಕೆಲಸಗಳನ್ನು ಬೇರೆ ರೀತಿಯಲ್ಲಿ ಮುಂದುವರಿಸಿಕೊಂಡೇ ಬಂದಿದ್ದಾರೆ. ಅವರು ಸಾಹಿತಿ ಮಾತ್ರವಲ್ಲ, ಜನಸಮೂಹದಿಂದ ಮೂಡಿಬಂದ ಸಾಂಸ್ಕೃತಿಕ ಹೋರಾಟಗಾರ. ಹೋರಾಟ ಮತ್ತು ಸಾಹಿತ್ಯವನ್ನು ಬೇರೆಯಾಗಿ ನೋಡದ ಅಥವಾ ಎರಡಾಗಿ ಒಡೆಯಲಾಗದ ಕನ್ನಡದ ವಿರಳ ಪರಂಪರೆಗೆ ಸೇರಿದವರು. ತಮ್ಮದೇ ಶೈಲಿಯ ವಿಶಿಷ್ಟ ಸಿನಿಮಾಗಳನ್ನು ನಿರ್ದೇಶಿಸಿದ ಕಾರಣದಿಂದಲೂ ಅವರು ಮುಖ್ಯರಾಗುತ್ತಾರೆ. ಹಲವು ರಂಗಗಳಲ್ಲಿ ಗಮನಾರ್ಹ ಕೆಲಸಗಳನ್ನು ಮಾಡಿರುವ, ಈ ಬಗೆಯ ಪ್ರತಿಭಾವಂತರ ಉದಾಹರಣೆಗಳು ಕನ್ನಡದಲ್ಲಿ ಕಡಿಮೆ. ಸಮಾಜ ಮತ್ತು ಮನುಷ್ಯನನ್ನು ಕೇಂದ್ರದಲ್ಲಿಟ್ಟುಕೊಂಡು ಚಿಂತಿಸುವ ಇಂತಹ ಲೇಖಕರು ಎಲ್ಲ ಕಾಲದಲ್ಲೂ ಮುಖ್ಯರಾಗುತ್ತಾರೆ. ಈ ಕಾಲಕ್ಕೂ ಅಗತ್ಯವಾದ ಅಂತಹ 'ನಿಜದನಿ'ಗಳು ಇತ್ತೀಚೆಗಂತೂ ವಿರಳವಾಗುತ್ತಲೇ ಹೋಗಿವೆ. ಸಂದರ್ಶನದಲ್ಲಿ ಅವರು ಆಡಿರುವ ಮಾತುಗಳು ಹೊಸತಲೆಮಾರಿನವರಲ್ಲಿ ಸ್ಫೂರ್ತಿಯನ್ನು, ಹುಮ್ಮಸ್ಸನ್ನು ಹುಟ್ಟಿಸುವಂತಿವೆ.

'ಮಯೂರ'ದ ಈ ಸಂಚಿಕೆ ಎಂದಿನಂತೆ ವೈವಿಧ್ಯಮಯವಾಗಿದೆ. ಓದುಗರಿಗಾಗಿ ಹೆಕ್ಕಿ ಕೊಟ್ಟಿರುವ ಕತೆ, ಪ್ರಬಂಧ, ವಿಮರ್ಶೆ, ಅಂಕಣಗಳು ಚೇತೋಹಾರಿಯಾದ ಓದನ್ನು ನೀಡಬಲ್ಲವು. ಕನ್ನಡ ಲೇಖಕರ ಬರವಣಿಗೆಯ ಸೌಂದರ್ಯ, ಶ್ರೀಮಂತಿಕೆ ಮತ್ತು ಜೀವಂತಿಕೆ ಪತ್ರಿಕೆಯ ಪುಟಗಳಿಂದ ಹೊಮ್ಮುವುದನ್ನು ಓದುಗರು ಮನಗಾಣಬಹುದು.

**ಮಯೂರ ಬಳಗ**